ತಿಂಗಳ ಋತುಮಾನದ ಸಂದರ್ಭ ಆ ದಿನವೇ ಬಂದರೆ ಆಕೆಗೆ ನರಕ ದರ್ಶನವಾಗುತ್ತದೆ. ಶೌಚಾಲಯದ ವ್ಯವಸ್ಥೆ ಇಲ್ಲದೆ ಇರುವ ಶಾಲೆಗೆ ಹಾಕಿದರಂತೂ ಆಕೆ ದೈಹಿಕವಾಗಿ, ಮಾನಸಿಕವಾಗಿ ಇನ್ನಷ್ಟು ಕುಗ್ಗುತ್ತಾಳೆ.

### ವರ್ಗಾವಣೆ ಎಂಬ ಪೆಡಂಭೂತ

'ವರ್ಗಾವಣೆ ಎನ್ನುವ ಭೂತ ಶಿಕ್ಷಕಿಯರನ್ನು ಇನ್ನಿಲ್ಲದಂತೆ ಕಾಡುತ್ತದೆ. ವಾಹನ ಸೌಲಭ್ಯ ಇಲ್ಲದ, ತೆಪ್ಪದಲ್ಲೇ ಪ್ರತಿದಿನ ಶಾಲೆಗೆ ಹೋಗಿಬರುವಂತಹ, ಕನಿಷ್ಠ ಮೂಲ ಸೌಲಭ್ಯ ಇಲ್ಲದಂತಹ, ದಿನವೂ ಏಳೆಂಟು ಕಿಲೋ ಮೀಟರ್ ನಡೆದೇ ಹೋಗುವಂತಹ ಊರುಗಳಿಗೆ ಶಿಕ್ಷಕಿಯರನ್ನು ವರ್ಗಾಯಿಸಲಾಗುತ್ತದೆ. ಮಾನವೀಯ, ಭಾವನಾತ್ಮಕ ಮಾನದಂಡಗಳನ್ನು ಶಿಕ್ಷಕಿಯರ ವರ್ಗಾವಣೆ ಮಾಡುವಾಗ ಅಧಿಕಾರಿಗಳು ಅನುಸರಿಸುವುದಿಲ್ಲ. ಇಲಾಖೆ ಬಳಿ ನಾವೇನಾದರೂ ಸಮಸ್ಯೆ ಹೇಳಿಕೊಂಡರೆ, 'ಎಲ್ಲ ವಿಷಯದಲ್ಲೂ ಮೀಸಲಾತಿ ಕೇಳುತ್ತೀರಿ. ಕೆಲಸ ಮಾಡಲು ಆಗುವುದಿಲ್ಲವೇ?' ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಯಾವ ಶಿಕ್ಷಕಿಯೂ ಕೆಲಸದಿಂದ ನುಣುಚಿಕೊಳ್ಳಲು ಇಷ್ಟಪಡುವುದಿಲ್ಲ. ಆದರೆ, ಕೆಲವೊಮ್ಮೆ ಕೆಲ ಸಮಸ್ಯೆಗಳು ಆಕೆಯನ್ನು ದೈನ್ಯ ಸ್ಥಿತಿಗೆ ನಿಲ್ಲಿಸುತ್ತವೆ' ಎಂಬ ಮಮತಾ ಅವರ ಮಾತು, ಸರ್ಕಾರದ ಮಾನದಂಡಗಳೂ ಮಹಿಳಾವಿರೋಧಿ ಆಗಿರುವುದನ್ನು ಸೂಚಿಸುತ್ತವೆ.

ಇನ್ನು ಶಿಕ್ಷಕಿಗೇನಾದರೂ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಅಥವಾ ಇನ್ನಿತರೆ ಪ್ರಶಸ್ತಿ ಬಂದರಂತೂ ಮುಗಿದೇ ಹೋಯಿತು. 'ಅದೆಷ್ಟು ಹಣ ತುಂಬಿದ್ದಾಳೊ, ಅದೇನು ಲಾಬಿ ನಡೆಸಿದ್ದಾಳೊ' ಎನ್ನುವ ಕೊಂಕು ಮಾತುಗಳು ಪ್ರಶಸ್ತಿ ಪತ್ರದ ಬೆನ್ನಿಗೆ ಅಂಟಿಕೊಂಡು ಬರುತ್ತವೆ.

ಶಿಕ್ಷಕಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಅಂದರೆ ಸಾಹಿತ್ಯ, ರಂಗಭೂಮಿ, ಸಮಾಜಸೇವೆ, ಕ್ರೀಡೆ ಇತರ ಕ್ಷೇತ್ರಗಳಲ್ಲಿ ತೊಡಗಿಕೊಂಡರೂ ಸಮಾಜ–ಸಹೋದ್ಯೋಗಿಗಳು ಅವರನ್ನು ನೋಡುವ ಪರಿಯೇ ಬೇರೆ. ಮಾತು ಮಾತಿಗೂ ಹೀಯಾಳಿಸುವುದು ಹೆಚ್ಚಾಗುತ್ತದೆ. ಇದೆಲ್ಲವನ್ನು 'ಸಹನಾ ಮೂರ್ತಿ'ಯಂತೆ ಸಹಿಸಿಕೊಳ್ಳಲೇಬೇಕು.

ಕೆಲಸದಲ್ಲಿನ ಒತ್ತಡ, ಸಹೋದ್ಯೋಗಿಗಳ, ಕುಟುಂಬದ ಅಸಹಕಾರ, ದೈಹಿಕ ಕಾರಣಗಳಿಂದ ಇಂದು ಎಷ್ಟೋ ಮಹಿಳೆಯರು ಬಡ್ತಿಯನ್ನು ನಿರಾಕರಿಸಿದ್ದಾರೆ. ಮುಖ್ಯ ಶಿಕ್ಷಕಿಯೋ, ಇನ್ನೇನೋ ಆಗಿ ಬಡ್ತಿ ಪಡೆದರೆ ಜವಾಬ್ದಾರಿ ಹೆಚ್ಚುತ್ತದೆ. ಕರೆದಲ್ಲಿಗೆ ಸಭೆಗೆ ಹೋಗಬೇಕು, ಸಮಯ ಮೀರಿದರೂ ಕರ್ತವ್ಯ ನಿರ್ವಹಿಸಬೇಕು. ಈ ಗೋಜಲನ್ನು ಮೈಮೇಲೆ ಹಾಕಿಕೊಳ್ಳಲು ಇಷ್ಟಪಡದ ಹೆಣ್ಣುಮಗಳು ಯಥಾಸ್ಥಿತಿಯನ್ನೇ ಕಾಯ್ದುಕೊಳ್ಳುತ್ತಾಳೆ. ಇರುವ ಒತ್ತಡವನ್ನೇ ನಿಭಾಯಿಸಿದರೆ ಸಾಕು; ಇನ್ನಷ್ಟು ಜವಾಬ್ದಾರಿ (ಹೊರೆ) ಯಾಕೆ ಎಂದು ವೃತ್ತಿಯಲ್ಲಿ ಮೇಲೇರುವ ಅವಕಾಶವನ್ನು ತ್ಯಜಿಸಿರುವ ಉದಾಹರಣೆಗಳು ಸಾಕಷ್ಟಿವೆ.


ಶೋಭಾ ಡಿ.ಎಸ್

'ಮಹಿಳೆಯರು ಬದ್ಧತೆಯಿಂದ ಕೆಲಸ ಮಾಡುತ್ತಾರೆ ಎಂದು ಎಲ್ಲವನ್ನೂ ಆಕೆಯ ತಲೆಗೇ ಕಟ್ಟಿದರೆ ಹೇಗೆ? ಬೇರೆ ಎಲ್ಲ ವಲಯಗಳಲ್ಲಿ ಕೆಲಸಗಳು ವಿಳಂಬವಾದರೆ ಸಾರ್ವಜನಿಕರು ಪ್ರತಿಭಟನೆ ಮಾಡುತ್ತಾರೆ. ಆದರೆ, ಪಾಠ ಹಿಂದುಳಿದರೆ ವಿದ್ಯಾರ್ಥಿಗಳು ಪ್ರಶ್ನಿಸುವಷ್ಟು ಧ್ವನಿ ಹೊಂದಿಲ್ಲವಲ್ಲ. ಹಾಗಾಗಿ, ಇತರೆ ಇಲಾಖೆಗಳ ಕೆಲಸಕ್ಕೂ ಶಿಕ್ಷಕ ವರ್ಗವನ್ನೇ ನಿಯೋಜಿಸಿಕೊಳ್ಳುತ್ತಾರೆ' ಎನ್ನುವ ಮಮತಾ ಅರಸೀಕೆರೆ ಅವರ ಮಾತು ಸರ್ಕಾರದ ಬೇಜವಾಬ್ದಾರಿಯನ್ನು ತೋರಿಸುವುದರ ಜೊತೆಗೆ ಸಮಾಜದ ಹೊಣೆಗಾರಿಕೆಯನ್ನೂ ನೆನಪಿಸುವಂತಿವೆ.

'ಈ ವ್ಯವಸ್ಥೆ ಹೀಗೇ ಮುಂದುವರಿದರೆ ಸರ್ಕಾರಿ ಶಾಲೆಯ ಮಕ್ಕಳ ಸ್ಥಿತಿ ಸುಧಾರಿಸುತ್ತದೆಯೇ? ಬಡ, ಕೂಲಿ ಕಾರ್ಮಿಕ, ರೈತರ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸುವವರು ಯಾರು?' ಎಂಬ ಸುಜಾತಾ ಎಚ್. ವಿ. ಅವರ ಪ್ರಶ್ನೆಯೇನೋ ತುಂಬ ಸರಳವಾಗಿದೆ. ಆದರೆ ಇದಕ್ಕೆ ಉತ್ತರ ಹುಡುಕುವುದಂತೂ ಮೇಲೆ ಕಾಣಿಸುವಷ್ಟು ಖಂಡಿತ ಸರಳ ಅಲ್ಲ.

'ಮೊದಲ ಗುರು'ವಿನ ಪ್ರಶ್ನೆಗಳಿಗೆ ಸಮರ್ಥವಾದ ಉತ್ತರ ಕಂಡುಕೊಳ್ಳದೆ ಶಿಕ್ಷಕರ ದಿನ ಸಾರ್ಥಕವಾಗುವುದೂ ಸಾಧ್ಯವಿಲ್ಲ.


ಮಮತಾ ಅರಸೀಕೆರೆ

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in


